# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 730 |
| ಸದಸ್ಯರ ಹೆಸರು: | ಶ್ರೀ ಸಿ.ಎನ್. ಮಂಜೇಗೌಡ |
| ಉತ್ತರಿಸುವ ದಿನಾಂಕ: | 22.02.2023 |
| ಉತ್ತರಿಸುವವರು | ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮುಜರಾಯಿ ಇಲಾಖೆಯ ವ್ಯಾಪ್ತಿಯ ಅಧೀನದಲ್ಲಿರುವ ಎಷ್ಟು ದೇವಸ್ಥಾನಗಳಿಗೆ ಸಂಸ್ಥೆಗಳಿಗೆ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚನೆ ಮಾಡಲಾಗಿದೆ; ಯಾವಾಗ ಮಾಡಲಾಗಿದೆ ಹಾಗೂ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿರುವ ಧ್ಯೇಯೋದ್ದೇಶಗಳೇನು; (ವಿವರ ನೀಡುವುದು)</td><td>ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ 2 ಪ್ರಾಧಿಕಾರ ರಚನೆ ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿವೆ.
<table>
<tr><th>ಕ್ರ. ಸಂ</th><th>ದೇವಸ್ಥಾನಗಳ ಹೆಸರು</th><th>ಪ್ರಾಧಿಕಾರ ರಚಿಸಿ ಹೊರಡಿಸಲಾದ ಆದೇಶದ ವಿವರ</th></tr>
<tr><td>1</td><td>ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕು, ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ,</td><td>ಸಂಖ್ಯೆ: ಸಂವ್ಯಶಾಇ 21 ಶಾಸನ 2014, ದಿನಾಂಕ: 06.09.2014</td></tr>
<tr><td>2</td><td>ಬಳ್ಳಾರಿ ಜಿಲ್ಲೆ, ಹೂವಿನ ಹಡಗಲಿ ತಾಲ್ಲೂಕು, ಮೈಲಾರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಹಾಗೂ ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲ್ಲೂಕು, ದೇವರಗುಡ್ಡ ಗ್ರಾಮದ ಶ್ರೀ ಮಾಲತೇಶ ದೇವಾಲಯಗಳಿಗೆ ಜಂಟಿಯಾಗಿ ಪ್ರಾಧಿಕಾರ ರಚಿಸಲಾಗಿದೆ.</td><td>ಸಂಖ್ಯೆ: ಕಂಇ 71 ಮುಅಬಿ 2017, ದಿನಾಂಕ:16.03.2013</td></tr>
</table>
ಕ್ರಮ ಸಂಖ್ಯೆ:1 ರ ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕು, ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದ ಅಭಿವೃದ್ಧಿ ಪ್ರಾಧಿಕಾರವು ಚಾಲ್ತಿಯಲ್ಲಿದ್ದು, ದೇವಸ್ಥಾನದ ಆಡಳಿತವನ್ನು ಪ್ರಾಧಿಕಾರದಿಂದ ನಿರ್ವಹಿಸಲಾಗುತ್ತಿದೆ.<br><br>ಕ್ರಮ ಸಂಖ್ಯೆ:2 ರ ಬಳ್ಳಾರಿ ಜಿಲ್ಲೆ, ಹೂವಿನಹಡಗಲಿ ತಾಲ್ಲೂಕು, ಮೈಲಾರ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಹಾಗೂ ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲ್ಲೂಕು, ದೇವರಗುಡ್ಡ ಗ್ರಾಮದ ಶ್ರೀ ಮಾಲತೇಶ ದೇವಾಲಯಗಳಿಗೆ ಜಂಟಿಯಾಗಿ ಪ್ರಾಧಿಕಾರವನ್ನು ರಚಿಸಲಾಗಿರುವ ಸರ್ಕಾರದ ಆದೇಶವನ್ನು ಪ್ರಶ್ನಿಸಿ, ಸದರಿ ದೇವಾಲಯಗಳ ಅನುವಂಶಿಕ ಧರ್ಮಕರ್ತರು ಮಾನ್ಯ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:102713/2018 ಹಾಗೂ ರಿಟ್ ಅರ್ಜಿ ಸಂಖ್ಯೆ:.102246/2018 ಅನ್ನು ದಾಖಲು ಮಾಡಿರುತ್ತಾರೆ. ಪ್ರಕರಣದಲ್ಲಿ ಮಾನ್ಯ ಉಚ್ಛನ್ಯಾಯಾಲಯವು ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ. ಸರ್ಕಾರದ ವತಿಯಿಂದ ಲಿಖಿತ ಆಕ್ಷೇಪಣೆ ಹಾಗೂ ತಡೆಯಾಜ್ಞೆ ತೆರವುಗೊಳಿಸಲು ಐಎ ಅನ್ನು ದಾಖಲಿಸಿದ್ದು ಪ್ರಕರಣವು ಇತ್ಯರ್ಥಕ್ಕೆ ಬಾಕಿಯಿರುತ್ತದೆ.</td></tr>
</table>

| | | |
|---|---|---|
| | | **ಉದ್ದೇಶ:** ಸದರಿ ದೇವಾಲಯಗಳನ್ನು ಅಂತರರಾಷ್ಟ್ರೀಯ ಯಾತ್ರಾ ಸ್ಥಳವಾಗಿ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಕೇಂದ್ರವಾಗಿ ಅಭಿವೃದ್ಧಿಗೊಳಿಸಲು |
| (ಆ) | ಈ ಪ್ರಾಧಿಕಾರಗಳಿಗೆ ಇಲ್ಲಿಯ ತನಕ ಸರ್ಕಾರ ಎಷ್ಟು ಅನುದಾನವನ್ನು ನೀಡಿದೆ ಹಾಗೂ ಈ ಪ್ರಾಧಿಕಾರಕ್ಕೆ ಯಾವ ಯಾವ ಅಧಿಕಾರವನ್ನು ನೀಡಲಾಗಿದೆ; (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಸ್ಥಾನದ ಅಭಿವೃದ್ಧಿ ಪ್ರಾಧಿಕಾರ ರಚಿಸಲು ಸರ್ಕಾರದಿಂದ ಅನುದಾನವನ್ನು ನೀಡಿರುವುದಿಲ್ಲ.<br><br>ಶ್ರೀ ಮೈಲಾರಲಿಂಗೇಶ್ವರ ಹಾಗೂ ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲ್ಲೂಕು, ದೇವರಗುಡ್ಡ ಗ್ರಾಮದ ಶ್ರೀ ಮಾಲತೇಶ ದೇವಾಲಯಗಳಿಗೆ ಜಂಟಿಯಾಗಿ ಪ್ರಾಧಿಕಾರ ರಚಿಸಲು ಆಯವ್ಯಯದಲ್ಲಿ ಸರ್ಕಾರದ ಆದೇಶ ಸಂಖ್ಯೆ:ಕಂಇ 71 ಮುಅಬಿ 2017, ದಿನಾಂಕ:06.03.2018 ರಂದು ರೂ.5.00 ಕೋಟಿಗಳ ಅನುದಾನವನ್ನು ಘೋಷಿಸಲಾಗಿರುತ್ತದೆ. ಆದರೆ ಜಂಟಿ ಅಭಿವೃದ್ಧಿ ಪ್ರಾಧಿಕಾರ ರಚಿಸಿರುವ ಸರ್ಕಾರದ ಆದೇಶಕ್ಕೆ ಮಾನ್ಯ ಉಚ್ಚನ್ಯಾಯಾಲಯವು ತಡೆಯಾಜ್ಞೆ ನೀಡಿರುವುದರಿಂದ ಸದರಿ ಅನುದಾನ ಬಿಡುಗಡೆಗೊಳಿಸಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ:ಸಂವ್ಯಶಾಇ 06 ಶಾಸನ 2013 ದಿನಾಂಕ:16.03.2013ರ ಶ್ರೀ ಮಲೈಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2013 ಅನ್ವಯ ಅಧಿಕಾರ ಮತ್ತು ಕರ್ತವ್ಯಗಳನ್ನು ಪ್ರತ್ಯಾಯೋಜಿಸಲಾಗಿದೆ. |
| (ಇ) | ಮೈಸೂರು ಸಾಂಸ್ಕೃತಿಕ ನಗರ/ಅರಮನೆಗಳ ನಗರ ಧಾರ್ಮಿಕ ಮತ್ತು ಯೋಗ ನಗರದ ಪ್ರಖ್ಯಾತಿ ಹೊಂದಿರುವುದರೊಂದಿಗೆ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ಪ್ರವಾಸಿ ತಾಣವಾಗಿರುವುದರಿಂದ ಇನ್ನು ಹೆಚ್ಚಿನ ಅಭಿವೃದ್ಧಿಗಾಗಿ ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಮತ್ತು ಅದಕ್ಕೆ ಸೇರಿದ ಸಮೂಹ ದೇವಸ್ಥಾನಗಳನ್ನು ಸೇರಿಸಿ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಮತ್ತು ಸಮೂಹ ದೇವಸ್ಥಾನಗಳ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು; (ವಿವರ ನೀಡುವುದು) | ಮೈಸೂರು, ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯ ಹಾಗೂ ಅರಮನೆ ಮುಜರಾಯಿ ಸಮೂಹದ 23 ದೇವಾಲಯಗಳನ್ನು ಒಳಗೊಂಡು ಒಟ್ಟು 24 ದೇವಾಲಯಗಳು ಶ್ರೀ ಚಾಮುಂಡೇಶ್ವರಿ ಮತ್ತು ಸಮೂಹ ದೇವಾಲಯಗಳಾಗಿರುತ್ತವೆ.<br><br>ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಂಡಿದ್ದು, ದಾಸೋಹ ಭವನ, ವಸತಿಗೃಹ, ಛತ್ರಗಳು, ವಾಹನ ನಿಲುಗಡೆ, ವಾಣಿಜ್ಯ ಸಮುಚ್ಛಯ, ರಸ್ತೆ ನಿರ್ಮಾಣ, ಸಿಸಿ ಟಿವಿ ಅಳವಡಿಕೆ ಸರ್ಕಾರಿ ಹಾಗೂ ದೇವಾಲಯದ ನೌಕರರ ಸಿಬ್ಬಂದಿಗಳ ಮೇಲ್ವಿಚಾರಣೆಯಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br><br>ಈಗಾಗಲೇ ಭಕ್ತರ ಅನುಕೂಲಕ್ಕಾಗಿ ಮೂಲಭೂತ ಸೌಕರ್ಯಗಳನ್ನು ವ್ಯವಸ್ಥಿತವಾಗಿ ಕಲ್ಪಿಸಲಾಗಿದ್ದು, ಧಾರ್ಮಿಕ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿಯೇ ಉತ್ತಮ ರೀತಿಯಲ್ಲಿ ದೇವಾಲಯದ ನಿರ್ವಹಣೆಯ ಕಾರ್ಯವು ನಡೆಯುತ್ತಿರುವುದರಿಂದ ಪ್ರಸ್ತಾಪಿತ ದೇವಾಲಯಕ್ಕೆ ಅಭಿವೃದ್ಧಿ ಪ್ರಾಧಿಕಾರ ರಚಿಸುವ ಬಗ್ಗೆ ಈ ಕೆಳಗಿನಂತೆ ಅಭಿಪ್ರಾಯಿಸಲಾಗಿದೆ:-<br><br>1. ಶ್ರೀ ಚಾಮುಂಡೇಶ್ವರಿ ಸಮೂಹ ದೇವಾಲಯವು ಒಟ್ಟು 24 ದೇವಾಲಯಗಳನ್ನು ಒಳಗೊಂಡಿದ್ದು ಈ ದೇವಾಲಯಗಳು ಮೈಸೂರು ನಗರ ಮತ್ತು ಗ್ರಾಮಾಂತರ ಪ್ರದೇಶದ ವ್ಯಾಪ್ತಿಯಲ್ಲಿರುವುದರಿಂದ ಪ್ರಾಧಿಕಾರ ರಚಿಸಿದಲ್ಲಿ ಇವುಗಳ ಆಡಳಿತ ನಿರ್ವಹಣೆ ಕುಂಠಿತವಾಗುವ ಸಂಭವವಿರುತ್ತದೆ. |

| | | |
|---|---|---|
| | | 2. ಅಭಿವೃದ್ಧಿ ಪ್ರಾಧಿಕಾರ ರಚಿಸಲು ಹೊಸದಾಗಿ ಪ್ರಾಧಿಕಾರದ ಕಛೇರಿ ಹಾಗೂ ಕಛೇರಿಯಯಲ್ಲಿ ಪೀಠೋಪಕರಣಗಳ ವ್ಯವಸ್ಥೆಯನ್ನು ಹಾಗೂ ಇತರೆ ಸವಲತ್ತುಗಳನ್ನು ನಿರ್ಮಿಸಲು ಹೆಚ್ಚಿನ ಖರ್ಚು ವೆಚ್ಚವನ್ನು ಮಾಡಬೇಕಾಗಿರುತ್ತದೆ.<br>3. ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದಲ್ಲಿ ಇಲಾಖೆಯ ಸಾಮಾನ್ಯ ಸಂಗ್ರಹಣಾ ನಿಧಿಯಿಂದ 'ಸಿ' ವರ್ಗದ ದೇವಾಲಯದ ಕಾಮಗಾರಿಗಳಿಗೆ ನೀಡುವ ಅನುದಾನಕ್ಕೆ ಅಡಚಣೆ ಉಂಟಾಗುತ್ತದೆ ಹಾಗೂ ಇಲಾಖೆಯ ಸಾಮಾನ್ಯ ಸಂಗ್ರಹಣಾ ನಿಧಿಗೆ ಆರ್ಥಿಕವಾಗಿ ನಷ್ಟವಾಗಲಿರುತ್ತದೆ.<br>4. ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದಲ್ಲಿ ಈ ದೇವಾಲಯದ ವತಿಯಿಂದ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಟ್ಟ 'ಸಿ' ವರ್ಗದ ದೇವಾಲಯಗಳನ್ನು ದತ್ತು ಪಡೆದು ಜೀರ್ಣೋದ್ಧಾರ/ ಅಭಿವೃಧಿಗೊಳಿಸಲು ಅಡಚಣೆ ಉಂಟಾಗುತ್ತದೆ.<br>5. ಈಗಾಗಲೇ ದೇವಾಲಯದ ಆಡಳಿತ ನಿರ್ವಹಣೆಗಾಗಿ "ಎ" ಹಿರಿಯ ಶ್ರೇಣಿ ವರ್ಗದ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಮತ್ತು ಇವರಿಗೆ ಆಡಳಿತದ ನಿರ್ವಹಣೆಯಲ್ಲಿ ಸಹಕಾರ ನೀಡಲು "ಬಿ" ವರ್ಗದ ಸಹಾಯಕ ಕಾರ್ಯ ನಿರ್ವಾಹಣಾಧಿಕಾರಿಯವರನ್ನು ನೇಮಕಗೊಳಿಸಲಾಗಿರುತ್ತದೆ.<br>6. ಈ ದೇವಾಲಯದ ಅಭಿವೃಧಿಯ ಸಲಹೆ ಸೂಚನೆ ಮತ್ತು ಮೇಲ್ವಿಚಾರಣೆಗಾಗಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಕಾಯ್ದೆ 2011 ಸೆಕ್ಷನ್ 21 ರನ್ವಯ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಈ ಮೇಲಿನ ಎಲ್ಲಾ ಅಂಶಗಳೊಂದಿಗೆ ಪ್ರಸ್ತುತ ಈ ದೇವಾಲಯದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಅತ್ಯವಶ್ಯ ಮೂಲಭೂತ ಸೌಕರ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೆ ತರಲು ದೇವಾಲಯದ ಆರ್ಥಿಕ ಲಭ್ಯತೆಗೆ ಒಳಪಟ್ಟು ಕ್ರಮ ಜರುಗಿಸಲಾಗುವುದರಿಂದ ಮತ್ತು ಈಗಾಗಲೇ ಕಾರ್ಯನಿರ್ವಾಹಣಾಧಿಕಾರಿ ನೇಮಿಸಿರುವುದರಿಂದ ಸುಗಮ ಆಡಳಿತ ಹಾಗೂ ಆರ್ಥಿಕ ಹಿತದೃಷ್ಠಿಯಿಂದ ದೇವಾಲಯದ ಪ್ರಾಧಿಕಾರ ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| (ಈ) | ಈ ಕುರಿತು ಸರ್ಕಾರ ಕೂಡಲೇ ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಲು ಕ್ರಮವಹಿಸಲಾಗುವುದೆ? | ಈ ದೇವಾಲಯಕ್ಕೆ ಪ್ರಾಧಿಕಾರ ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

(ಸಂಖ್ಯೆ: ಕಂಇ 27 ಮುಸಪ್ರ 2023)

**(ಶಶಿಕಲಾ. ಅ. ಜೊಲ್ಲೆ)**
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು.